ಇಂದು ದಿಃ **04-06-2026 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಯನ್ನು ಪುನಃ ಕರೆಯಿ**ಸಿ ಪ್ರಮಾಣ ವಚನ ಬೋಧಿಸಲಾಯಿತು**.**

**ಪಾಟೀ ಸವಾಲುಃ ಶ್ರೀ ಬಿ ಯು ವಕೀಲರಿಂದ 2 ರಿಂದ 4 ಪ್ರತಿವಾದಿಯ ಪರಃ**

ವಾದಿ ನನ್ನ ತಾಯಿ . ನನ್ನ ತಾಯಿ ಆರೋಗ್ಯವಾಗಿದ್ದಾಳೆಂದರೆ ಸರಿಯಲ್ಲ. ಆಕೆಗೆ ಕಾಲು ನೋವು ಇದೆ, ಬಿ ಪಿ , ಶುಗರ್ ಇದೆ. ಆಕೆಯ ಕೆಲಸ ಆಕೆಯೇ ಮಾಡಿಕೊಳ್ಳುತ್ತಾಳೆ. ನ್ಯಾಯಾಲಯಕ್ಕೆ ಬರಲು ಆಕೆಗೆ ಸಮಸ್ಯೆ ಇಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ನನ್ನ ತಾಯಿ ನ್ಯಾಯಾಲಯಕ್ಕೆ ಬಂದರೆ ನಿಜ ಸಂಗತಿ ಗೊತ್ತಾಗುತ್ತದೆ ಎಂದು ತಿಳಿದು , ನಾನು ಅಧಿಕಾರಿ ಪತ್ರ ಪಡೆದುಕೊಂಡಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿ ಆರೋಗ್ಯವಾಗಿದ್ದರೂ ಸತ್ಯಾಂಶ ಬಚ್ಚಿಟ್ಟು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ತಾಯಿಯ ವೈದ್ಯಕೀಯ ದಾಖಲೆಗಳನ್ನು ಹಾಜರು ಪಡಿಸಿಲ್ಲ ಬೇಕಾದರೆ ಹಾಜರು ಪಡಿಸುತ್ತೇನೆ. ನನ್ನ ತಾಯಿ ಈ ದಾವೆಯನ್ನು ಏನು ಪರಿಹಾರ ಕೇಳಿ ಮಾಡಿದ್ದಾರೆಂದು ಮಾಹಿತಿ ಇದೆ . ನನ್ನ ತಾಯಿ ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿ ಕೊಟ್ಟಿದ್ದಾರೆ . ನನ್ನ ತಾಯಿಗೆ ಮೂರು ಜನ ಸಹೋದರರು ಇರುತ್ತಾರೆ . ನನ್ನ ಅಜ್ಜನ ಹೆಸರು ರೇವಣಸಿದ್ದಪ್ಪ . ನನ್ನ ಅಜ್ಜಿಯ ಹೆಸರು ಗಂಗಮ್ಮ . ಅವರಿಗೆ ಒಟ್ಟು ಆರು ಜನ ಮಕ್ಕಳು. ಅವರೆಂದರೆ ರೇವಣಸಿದ್ದಪ್ಪ , ಗೌರಮ್ಮ , ರಾಮಪ್ಪ , ಲಕ್ಷ್ಮಮ್ಮ , ಮಂಜಪ್ಪ , ನನ್ನ ತಾಯಿ. ನನ್ನ ತಾಯಿ ಮತ್ತು ಆಕೆಯ ಸಹೋದರಿಯರ ಮದುವೆಗಳು ಆಗಿದೆ ಎಂದರೆ ಸರಿ . ನನ್ನ ಅಜ್ಜನ ಕುಟುಂಬದಲ್ಲಿ ಸುಮಾರು ವರ್ಷಗಳ ಹಿಂದೆಯೇ ಪಾಲುವಿಭಾಗ ಆಗಿದೆ ಎಂದರೆ ಸರಿಯಲ್ಲ.

ಗೌರಮ್ಮ ತೀರಿಕೊಂಡಿದ್ದಾಳೆಂದರೆ ಸರಿ . ಆಕೆಯ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರ ಎಂದು ಮಾಡಿದ್ದೇನೆ. ನನಗೆ ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇದೆ.

ಮುಂದಿನ ಪಾಟೀ ಸವಾಲಿಗೆ ಸಮಯ ಕೇಳಿದ್ದು , ನೀಡಲಾಯಿತು.

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ, ಸಂಚಾರಿ ನ್ಯಾಯಾಲಯ,
ಹೊನ್ನಾಳಿ.